# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 610 |
| ಸದಸ್ಯರ ಹೆಸರು | ಶ್ರೀ ಸೂರಜ್ ರೇವಣ್ಣ<br>(ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದವರು) |
| ಉತ್ತರಿಸುವ ದಿನಾಂಕ | 23-02-2024 (20-02-24) |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಉತ್ಪಾದನೆಯಾಗಿರುವ ಅಕ್ಕಿ,ರಾಗಿ, ಜೋಳ ಮತ್ತು ಗೋಧಿಯ ಪ್ರಮಾಣ ಎಷ್ಟು;(ವಿವರ ನೀಡುವುದು) | ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಉತ್ಪಾದನೆಯಾಗಿರುವ ಅಕ್ಕಿ,ರಾಗಿ, ಜೋಳ ಮತ್ತು ಗೋಧಿಯ ಪ್ರಮಾಣ ಈ ಕೆಳಗಿನಂತಿದೆ.<br>(ಉತ್ಪಾದನೆ ಲಕ್ಷ ಟನ್ ಗಳಲ್ಲಿ)<br>**ಬೆಳೆ/ವರ್ಷ** \| **2020-21** \| **2021-22** \| **2022-23**<br>ಅಕ್ಕಿ \| 47.17 \| 44.99 \| 43.55<br>ರಾಗಿ \| 13.69 \| 11.27 \| 11.48<br>ಜೋಳ \| 9.04 \| 7.33 \| 6.82<br>ಗೋಧಿ \| 2.62 \| 2.12 \| 2.00<br>ಮೂಲ: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ವರದಿ. |
| ಆ) | ಪ್ರಸ್ತುತ ಸರ್ಕಾರದಲ್ಲಿ ದಾಸ್ತಾನಿನಲ್ಲಿರುವ ಅಕ್ಕಿ,ರಾಗಿ, ಜೋಳ ಮತ್ತು ಗೋಧಿಯ ಪ್ರಮಾಣ ಎಷ್ಟು; (ವಿವರ ನೀಡುವುದು) | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ ಸಾರ್ವಜನಿಕ ವಿತರಣಾ ಪದ್ಧತಿಯಡಿ ಅರ್ಹ ಫಲಾನುಭವಿಗಳಿಗೆ ಪ್ರತಿ ಮಾಹೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ನಿಗಧಿಪಡಿಸಿರುವ ಪ್ರಮಾಣದ ಆಹಾರಧಾನ್ಯವನ್ನು ಉಚಿತವಾಗಿ ಹಂಚಿಕೆ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ಕೇಂದ್ರ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಪ್ರತಿ ಮಾಹೆ 2,17,403 ಮೆಟ್ರಿಕ್.ಟನ್ ಆಹಾರಧಾನ್ಯ ಉಚಿತವಾಗಿ ಬಿಡುಗಡೆಯಾಗುತ್ತಿದ್ದು, ಸದರಿ ದಾಸ್ತಾನು ಪ್ರತಿ ಮಾಹೆ ಗೋದಾಮುಗಳಿಗೆ ಎತ್ತುವಳಿಯಾಗುತ್ತದೆ. ಕೇಂದ್ರ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಒಟ್ಟು ಹಂಚಿಕೆ ಭಾಗವಾಗಿ ಅಕ್ಕಿ, ರಾಗಿ ಮತ್ತು ಜೋಳವನ್ನು ಹಂಚಿಕೆ ಮಾಡಲಾಗುತ್ತಿದ್ದು, ರಾಗಿ ಮತ್ತು ಜೋಳವನ್ನು ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರಾಜ್ಯದ ರೈತರಿಂದ ಖರೀದಿಸಿ ಲಭ್ಯತೆಗನುಗುಣವಾಗಿ ಹಂಚಿಕೆ ಮಾಡಲಾಗುತ್ತಿದೆ. ಇದಲ್ಲದೇ, ರಾಜ್ಯ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಫಲಾನುಭವಿಗಳಿಗೆ ಪ್ರತಿ ಮಾಹೆ ಅಂದಾಜು 20,000 ಮೆಟ್ರಿಕ್ ಟನ್ ಆಹಾರಧಾನ್ಯ ಹಂಚಿಕೆ ಮಾಡಲಾಗುತ್ತಿದ್ದು, ಅಕ್ಕಿಯೊಂದಿಗೆ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಖರೀದಿಸಿದ ರಾಗಿ ಮತ್ತು ಜೋಳವನ್ನು ಸಹ ಹಂಚಿಕೆ ಮಾಡಲಾಗುತ್ತಿದೆ. |

<table>
<tr>
<td>ಇ)</td>
<td>ದಾಸ್ತಾನಿನಲ್ಲಿರುವ ಪದಾರ್ಥಗಳನ್ನು ರಾಜ್ಯ ರೈತರಿಂದ ಖರೀದಿಸಲಾಗಿದೆಯೇ; ಹಾಗಿದ್ದಲ್ಲಿ ಯಾವ ದರದಲ್ಲಿ ಖರೀದಿಸಲಾಗಿದೆ; ಹೊರ-ರಾಜ್ಯದಿಂದ ಖರೀದಿಸಿದ್ದಲ್ಲಿ ಎಷ್ಟು ಪ್ರಮಾಣ ಮತ್ತು ಯಾವ ದರದಲ್ಲಿ ಖರೀದಿಸಲಾಗಿದೆ? (ವಿವರ ನೀಡುವುದು.)</td>
<td>ಕೇಂದ್ರ ಸರ್ಕಾರದ ಅನುಮತಿಯಂತೆ ಮತ್ತು ಮಾರ್ಗಸೂಚಿಗಳಂತೆ ರಾಜ್ಯದಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಭತ್ತ, ರಾಗಿ ಮತ್ತು ಜೋಳವನ್ನು ಖರೀದಿಸಲಾಗುತ್ತಿದೆ. 2022-23ನೇ ಸಾಲಿನ ಕೇಂದ್ರ ಸರ್ಕಾರ ನಿಗಧಿಪಡಿಸಿರುವ ದರ ಮತ್ತು ಖರೀದಿಸಲಾದ ಪ್ರಮಾಣದ ವಿವರ ಕೆಳಗಿನಂತಿದೆ.<br>
<table>
<tr><th colspan="2">ಬೆಳೆ</th><th>ದರ ರೂ/ಕ್ವಿಂಟಾಲ್</th><th>ಖರೀದಿಸಿದ ಪ್ರಮಾಣ(ಮೆಟ್ರಿಕ್ ಟನ್‌ಗಳಲ್ಲಿ)</th></tr>
<tr><td>ಭತ್ತ</td><td>ಸಾಮಾನ್ಯ</td><td>2040</td><td rowspan="2">20594.726</td></tr>
<tr><td>ಭತ್ತ</td><td>ಗ್ರೇಡ್-ಎ</td><td>2060</td></tr>
<tr><td rowspan="2">ಜೋಳ</td><td>ಹೈಬ್ರಿಡ್</td><td>2970</td><td rowspan="2">76896.500</td></tr>
<tr><td>ಮಾಲ್ದಂಡಿ</td><td>2990</td></tr>
<tr><td>ರಾಗಿ</td><td></td><td>3578</td><td>454404.100</td></tr>
</table>
<br>
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ ಹೊರ ರಾಜ್ಯದಿಂದ ಆಹಾರಧಾನ್ಯ ಖರೀದಿಸಲಾಗುತ್ತಿಲ್ಲ.</td>
</tr>
</table>

ಸಂಖ್ಯೆ: AGRI/31/ACT/2024

(ಎನ್. ಚಲುವರಾಯಸ್ವಾಮಿ)

ಕೃಷಿ ಸಚಿವರು